**<u>ಸಾಕ್ಷಿಯನ್ನು ದಿನಾಂಕ 01.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಕೆ ವಕೀಲರಿಂದಃ</u>**

1. ಪಾರ್ವತಮ್ಮ ನನ್ನ ಸಂಬಂಧಿಕಳಲ್ಲ. ಪಾರ್ವತಮ್ಮನ ಹೆಸರಿಗೆ ನಿಮ್ಮ ತಂದೆ ಯಾವ ಕಾರಣಕ್ಕೆ ವಿಲ್ ಬರೆದಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿ ಆಕೆ ನಮ್ಮ ತಂದೆಯಿಂದ ಜಮೀನು ಗುತ್ತಿಗೆ ಪಡೆದು ಉಳುಮೆ ಮಾಡುತ್ತಿದ್ದಳು ಮತ್ತು ಸಂದರ್ಭದಲ್ಲಿ ವಿಲ್ ಸೃಷ್ಟಿ ಮಾಡಿಕೊಂಡಿದ್ದಾಳೆ ಎನ್ನುತ್ತಾರೆ.
2. ಸರ್ಕಾರದಿಂದ ಜಮೀನು ಮಂಜೂರು ಮಾಡುವಾಗ ಸದರಿ ಜಮೀನು ಎಲ್ಲಿದೆ ಎಂಬ ಬಗ್ಗೆ ನಿಖರವಾಗಿ ಗುರುತಿಸಿ ಮತ್ತು ಅಳತೆ ಮಾಡಿ ವರದಿ ಪಡೆಯುತ್ತಾರೆ ಎಂದರೆ ಸರಿ. ನಮ್ಮ ತಂದೆಗೆ ಸರ್ವೆ ನಂಬರ್ 31/16 ನ್ನು ಜಮೀನು ಮಂಜೂರಾಗಿದೆ. ಸಾಕ್ಷಿ ಪುನಃ ಸರ್ವೆ ನಂಬರ್ 31/16 ಪೋಡಾಗದೇ ಇರುವುದರಿಂದ ಈಗ 31* ಎಂದು ಗುರುತಿಸಲಾಗುತ್ತಿದೆ ಎನ್ನುತ್ತಾರೆ. ಸರ್ವೆ ನಂಬರ್ 31 ರಲ್ಲಿ ಸುಮಾರು 350 ಎಕರೆ ಜಮೀನು ಇದೆ. ಸದರಿ ಜಮೀನನ್ನು ನೂರಕ್ಕೂ ಹೆಚ್ಚು ಜನ ಹಿಡುವಳಿದಾರರು ಅನಧೀಕೃತವಾಗಿ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಸಾಗುವಳಿ ಮತ್ತು ಅನುಭವದ ಆಧಾರದಲ್ಲಿ ಸದರಿ ಹಿಡುವಳಿದಾರರಿಗೆ ಸರ್ಕಾರದವರು ಜಮೀನು ಮಂಜೂರು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂಬರಿನಲ್ಲಿ ನನ್ನ ತಂದೆಗೆ ಜಮೀನು ಮಂಜೂರಾದಾಗ ಅವರ ಜೊತೆ ಇತರೇ 30-40 ಜನರಿಗೂ ಬೇರೆ ಜಮೀನುಗಳು ಅದೇ ಸರ್ವೆ ನಂಬರಿನಲ್ಲಿ ಮಂಜೂರಾಗಿದ್ದವು. ನಿಪಿ-25 ರ ದಾಖಲೆ ನನ್ನ ತಂದೆ ಮತ್ತು ಅವರ ಜೊತೆ ಜಮೀನು ಮಂಜೂರಾದ ಇತರೇ ಫಲಾನುಭವಿಗಳ ಜಮೀನುಗಳು ಇರುವ ನಕಾಶೆಯಾಗಿದೆ.

3. ನಿಪಿ–25 ರ ನಕಾಶೆಯ ಪ್ರಕಾರ ಬ್ಲಾಕ್ ನಂಃ 15 ಮತ್ತು 16 ಅಕ್ಕ–ಪಕ್ಕದಲ್ಲಿದ್ದು, ಸದರಿ ಎರಡೂ ಬ್ಲಾಕುಗಳು ಸರ್ವೆ ನಂಬರ್ 31 ರ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಬ್ಲಾಕ್ ನಂಃ 15 ರ ಜಮೀನನ್ನು ಈಗ ಯಾರು ಸಾಗುವಳಿ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಮೂಲ ಮಂಜೂರಾತಿ ಪ್ರಕಾರ ಕೆಲವು ಹಿಡುವಳಿದಾರರು ಜಮೀನಿನ ಸ್ವಾಧೀನದಲ್ಲಿ ಇಲ್ಲದಿದ್ದರೂ ಅವರ ಹೆಸರಿಗೆ ದಾಖಲೆ ಮಾತ್ರ ಇದೆ ಎನ್ನುತ್ತಾರೆ. ನಿಪಿ–25 ರ ನಕಾಶೆಯಂತೆ ಯಾರು ಸ್ವಾಧೀನದಲ್ಲಿ ಇಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಬ್ಲಾಕ್ ನಂಃ 16 ರ ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ.

4. ನಿಪಿ–5 ಮತ್ತು 25 ರಂತೆ ನೀವು ಹಾಜರುಪಡಿಸಿರುವ ನಕಾಶೆಗಳ ಪೈಕಿ ಯಾವ ನಕಾಶೆಗೆ ಅನುಗುಣವಾಗಿ ನೀವು ಸ್ವಾಧೀನದಲ್ಲಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನಿಪಿ–5 ರ ನಕಾಶೆಯಲ್ಲಿ ನಮ್ಮ ತಂದೆ ಬ್ಯಾಂಕಿನಲ್ಲಿ ಸಾಲ ಪಡೆಯುವ ಉದ್ದೇಶದಿಂದ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ನಿಪಿ–1 ಮತ್ತು 2 ರ ದಾಖಲೆಗಳ ಆಧಾರದ ಮೇಲೆ ನಿಪಿ–3 ರಿಂದ 18 ಮತ್ತು 20 ರಿಂದ 22 ರ ದಾಖಲೆಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಪಿ–1 ರ ಮಂಜೂರಾತಿ ಪತ್ರದಲ್ಲಿ ನಮಗೆ ಮಂಜೂರು ಮಾಡಲಾದ ಜಮೀನಿನ ಚಕ್ಕುಬಂಧಿ ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಪುನಃ 1977–78 ರಲ್ಲಿ ಮಂಜೂರಾದ ಜಮೀನುಗಳಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳಲ್ಲಿ ಚಕ್ಕುಬಂಧಿಗಳು ನಮೂದಾಗಿಲ್ಲ ಎನ್ನುತ್ತಾರೆ. ಸರ್ವೆ ನಕಾಶೆಯಂತೆ ನಿಪಿ–1ರ ದಾಖಲೆಯಲ್ಲಿ ಚಕ್ಕುಬಂಧಿ ನಮೂದಾಗಿದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎನ್ನುತ್ತಾರೆ.

5. ವಾದ ಪತ್ರದಲ್ಲಿ ನಮೂದಾದಿಸಲಾಗಿರುವ ಚಕ್ಕುಬಂಧಿಗೆ ಒಳಪಟ್ಟು ದಾವಾ ಸ್ವತ್ತು ಇದೆ

ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿ ಗ್ರಾಮ ಲೆಕ್ಕಾಧಿಕಾರಿಗಳು ದಾವಾ ಸ್ವತ್ತಿಗೆ ಭೇಟಿ ಕೊಟ್ಟು ಸ್ಥಳ ಪರಿಶೀಲನೆ ಮಾಡಿ ಮಹಜರ್ ದಾಖಲೆ ಇದೆ ಎನ್ನುತ್ತಾರೆ. ದಾವಾ ಸ್ವತ್ತಿನ ಚಕ್ಕುಬಂಧಿ ಬರೆದುಕೊಡುವಂತೆ ನಾನು ಕೋರಿಕೊಂಡ ಮೇರೆಗೆ ಗ್ರಾಮ ಲೆಕ್ಕಾಧಿಕಾರಿಗಳು ದಾವಾ ಸ್ವತ್ತಿಗೆ ಬಂದು ಚಕ್ಕುಬಂಧಿ ಬರೆದಿದ್ದಾರೆ. ಜಮೀನಿನ ಅಕ್ಕ-ಪಕ್ಕದಲ್ಲಿ ಯಾರಿದ್ದಾರೆ ಎಂದು ನಾನು ಹೇಳಿದ್ದನ್ನು ಕೇಳಿಸಿಕೊಂಡು ಗ್ರಾಮ ಲೆಕ್ಕಾಧಿಕಾರಿಗಳು ಚಕ್ಕುಬಂಧಿ ಬರೆದಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನ ಚಕ್ಕುಬಂಧಿಯನ್ನು ಬರೆಯಲು ಗ್ರಾಮ ಲೆಕ್ಕಾಧಿಕಾರಿಗಳ ಬಳಿ ಬೇರೆ ಯಾವುದಾದರೂ ದಾಖಲೆ ಇತ್ತೇ ಎನ್ನುವುದು ನನಗೆ ಗೊತ್ತಿಲ್ಲ. ಚಕ್ಕುಬಂಧಿ ದಾಖಲೆ ಬರೆಯುವಾಗ ಗ್ರಾಮ ಲೆಕ್ಕಾಧಿಕಾರಿಗಳು ಆಜು-ಬಾಜುದಾರರ ಹೇಳಿಕೆ ಅಥವಾ ಸಹಿ ಪಡೆದಿಲ್ಲ. ದಾವಾ ಸ್ವತ್ತಿಗೆ ಗ್ರಾಮ ಲೆಕ್ಕಾಧಿಕಾರಿಗಳು ಬಂದು ಸ್ಥಳ ಪರಿಶೀಲನೆ ಮಾಡಿ ಮಹಜರ್ ಬರೆದು, ಚಕ್ಕುಬಂಧಿ ಗುರುತಿಸಿದ್ದಾರೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಬ್ಯಾಂಕಿನಿಂದ ಸಾಲ ಪಡೆಯುವ ಸಲುವಾಗಿ ಗ್ರಾಮ ಲೆಕ್ಕಾಧಿಕಾರಿಗಳ ಬಳಿ ಚಕ್ಕುಬಂಧಿ ದಾಖಲೆ ಬರೆಸಿಕೊಳ್ಳಲಾಗುತ್ತದೆ ಎಂದರೆ ಸರಿ.

6. ಸರ್ವೆ ನಂಬರ್ 31 ರ ದಕ್ಷಿಣ ಭಾಗದಲ್ಲಿ ಒಂದು ನಾಲೆ ಹರಿಯುತ್ತದೆ ಎಂದರೆ ಸರಿ. ನಮಗೆ ಸೇರಿದ್ದು ಎಂದು ನಾನು ಹೇಳುತ್ತಿರುವ ದಾವಾ ಸ್ವತ್ತು ಸದರಿ ನಾಲೆಯ ಪಕ್ಕದಲ್ಲಿರುವ ರಸ್ತೆಯ ನಂತರ ಬರುತ್ತದೆ. ಸರ್ವೆ ನಂಬರ್ 31 ರಲ್ಲಿ ಒಟ್ಟು ಎಷ್ಟು ಜನರಿಗೆ ಮತ್ತು ಎಷ್ಟೆಷ್ಟು ಜಮೀನು ಮಂಜೂರಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಆ ಸಂಬಂಧ ನಾನು ದಾಖಲೆ ನೋಡಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಪ್ರತಿವಾದಿಯರಿಗೆ ಯಾವಾಗ ಮತ್ತು ಎಷ್ಟು

ಜಮೀನು ಮಂಜೂರಾಗಿದೆ ಎಂದು ತೋರಿಸಲು ದಾಖಲೆಯನ್ನು ನಾನು ನೋಡಿಲ್ಲ.

7. ನಿಪಿ-25 ರಂತೆ ನಾನು ಹಾಜರುಪಡಿಸಿರುವ ನಕಾಶೆಯಲ್ಲಿ ಗುರುತಿಸಲಾಗಿರುವ ಸ್ಥಳದಲ್ಲಿಯೇ ಈಗಲೂ ಬ್ಲಾಕ್ ನಂಃ16 ರ ಜಮೀನು ಇದೆ. ನಿಪಿ-25 ರಲ್ಲಿ ಗುರುತಿಸಲಾಗಿರುವ ನಾಲೆ ಬ್ಲಾಕ್ ನಂಃ 16 ರ ಜಮೀನಿನಿಂದ ತುಂಬಾ ದೂರದಲ್ಲಿದೆ ಎನ್ನುವುದು ಸರಿಯಲ್ಲ. ಸಾಕ್ಷಿ ಪುನಃ ಬ್ಲಾಕ್ ನಂಃ16 ರ ಪಕ್ಕದಲ್ಲಿ ಒಂದು ರಸ್ತೆ ಇದೆ ನಂತರ ನಾಲೆ ಇದೆ ಎನ್ನುತ್ತಾರೆ.

8. ಬ್ಲಾಕ್ ನಂಃ 29 ಯಾವಾಗ ಮತ್ತು ಯಾರಿಗೆ ಮಂಜೂರಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಮಂಜೂರು ಮಾಡುವಂತೆ ರಾಜಪ್ಪ ಎಂಬುವವರು ಅರ್ಜಿ ಕೊಟ್ಟಿದ್ದರು ಮತ್ತು ಸದರಿಯವರು ಸಾಗುವಳಿ ಮಾಡದ ಕಾರಣ ಅವರ ಅರ್ಜಿ ತಿರಸ್ಕೃತಗೊಂಡಿದೆ ಎಂದರೆ ಸಾಕ್ಷಿ ರಾಜಪ್ಪ ಎಂಬ ವ್ಯಕ್ತಿ ಯಾರೂ ಇಲ್ಲ, ಆತ ಯಾವುದೇ ಅರ್ಜಿ ಕೊಟ್ಟಿಲ್ಲ ಮತ್ತು ಆ ಅರ್ಜಿ ತಿರಸ್ಕಾರ ಆಗಿಲ್ಲ ಎನ್ನುತ್ತಾರೆ. ಸದರಿ ಬ್ಲಾಕ್ ನಂಃ 29 ನ್ನು ಹಲವು ವರ್ಷಗಳಿಂದ ಪ್ರತಿವಾದಿಯ ಕುಟುಂಬದವರೇ ಸಾಗುವಳಿ ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ನಂತರ ಸದರಿ ಬ್ಲಾಕ್ ನಂಃ 29 1 ನೇ ಪ್ರತಿವಾದಿಗೆ ಮಂಜೂರಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ 31/29 ರಲ್ಲಿರುವ ಜಮೀನಿಗೂ ನನಗೂ ಯಾವುದೇ ಸಂಬಂಧ ಇಲ್ಲ ಮತ್ತು ಅದರಲ್ಲಿ ನನಗೆ ಯಾವುದೇ ರೀತಿಯ ಹಕ್ಕು-ಅಧಿಕಾರ ಅಥವಾ ಸ್ವಾಧೀನ ಇಲ್ಲ.

9. ನಾಲೆ ಪಕ್ಕದಲ್ಲಿಯೇ ಇರುವ ಸರ್ವೆ ನಂಬರ್ 31/29 ರಲ್ಲಿ 20 ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ಮಂಜೂರು ಮಾಡಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**

**1 ನೇ ಹೆಚ್ಚುವರಿ/ ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**